**ಸಾಕ್ಷಿಯನ್ನು ದಿಃ 27.06.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಆರ್. ವಕೀಲರಿಂದ:**

ನಿ.ಪಿ. 37 ಮತ್ತು 38 ದಾವಾ ಆಸ್ತಿಗೆ ಸಂಬಂಧಪಟ್ಟಿರುತ್ತದೆ. ನಿ.ಪಿ. 37 ಮತ್ತು 38 ರಲ್ಲಿ ನಮೂದು ಮಾಡಿರುವ ಖಾತಾ ಸಂಖ್ಯೆ 116 ಮತ್ತು 76 ರ ಬಗ್ಗೆ ದಾವಾದ ಷೆಡ್ಯೂಲ್ ನಲ್ಲಿ ಹೇಳಿರುತ್ತೇವೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 37 ಮತ್ತು 38 ದಾವಾ ಆಸ್ತಿಗೆ ಸಂಬಂಧಪಟ್ಟವುಗಳಲ್ಲ ಎಂದರೆ ಸರಿಯಲ್ಲ. ದಿನಾಂಕ 14.03.2008 ರಲ್ಲಿ ದಾವಾ ಸ್ವತ್ತನ್ನು ಹೊರತುಪಡಿಸಿ ಸೈಟ್ ನ್ನು ಖರೀದಿ ಮಾಡಿರುತ್ತೇನೆ. ದಿನಾಂಕ 14.03.2008 ರ ಕ್ರಯ ಪತ್ರ ನನ್ನ ಬಳಿ ಇದೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ಯಾವುದೇ ತೊಂದರೆ ಇಲ್ಲ. ನಿ.ಪಿ. 39 ರಲ್ಲಿರುವ ಸ್ವತ್ತು ದಾವಾ ಆಸ್ತಿಗೆ ಸಂಬಂಧಪಟ್ಟಿರುತ್ತದೆ. ನಿ.ಪಿ. 39 ರಲ್ಲಿರುವ ಆಸ್ತಿಯನ್ನು ವಾದಿಗಳಿಂದ ಖರೀದಿ ಮಾಡಿರುತ್ತೇನೆ. ನಂತರ ನನ್ನ ಹೆಸರಿಗೆ ಖಾತೆಯೂ ಸಹ ಆಗಿರುತ್ತದೆ. ನಿ.ಪಿ. 40 ಮತ್ತು 41 ದಾವಾ ಆಸ್ತಿಗೆ ಸಂಬಂಧಪಟ್ಟಿರುತ್ತದೆ. ದಾವಾ ಆಸ್ತಿಯಲ್ಲಿ ನನಗೆ ದಿನಾಂಕ 26.03.2002 ರ ಕ್ರಯದ ಕರಾರು ಪತ್ರದ ಆಧಾರದ ಮೇಲೆ ಹಕ್ಕಿದೆ. ಸದರಿ ಕರಾರು ಪತ್ರ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ಕರಾರು ಪತ್ರದ ಅಡಿಯಲ್ಲಿ ವಾದಿಗಳು ನನಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಟ್ಟಿಲ್ಲ. ದಿನಾಂಕ 26.03.2002 ರ ನನಗೆ ಆದ ಕರಾರು ಪತ್ರದಲ್ಲಿ ಪ್ರತಿವಾದಿಗಳು ಅಕ್ರಮವಾಗಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದು ಬರೆಯಲಾಗಿದೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಲ್ಲಾ ವ್ಯವಹರಣೆಗಳನ್ನು ಮಾಡಲು ವಾದಿಗಳು ನನಗೆ ಅಧಿಕಾರ ನೀಡಿರುತ್ತಾರೆ. ವಾದಿಗಳು ನನಗೆ ಯಾವುದೇ ಅಧಿಕಾರವನ್ನು ನೀಡದೇ ಇದ್ದರೂ ಸಹ ನಾನು ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ನಿ.ಪಿ.42, 45 ಮತ್ತು 48 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ. 50 ರಿಂದ 58 ರ ದಾಖಲೆಗಳನ್ನು ದಾವಾ ಆಸ್ತಿಯಲ್ಲಿ ಹಿಟ್ಟಿನ ಗಿರಣಿ ನಡೆಯುತ್ತಿಲ್ಲ ಮತ್ತು ದಾವಾ ಆಸ್ತಿಯಲ್ಲಿರುವ ಮನೆ ಶಿಥಿಲವಾಗಿದೆ ಎಂದು ತೋರಿಸಲು ಸಲ್ಲಿಸಿರುತ್ತೇನೆ. ವಾದಿಗಳು ದಿನಾಂಕ 05.11.1952 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ರಾಮಯ್ಯ ದಾವಾ ಆಸ್ತಿಯಲ್ಲಿರುವ ಹಳೆಯ ಕಟ್ಟಡವನ್ನು ಒಡೆದು ಹಾಕಿ ಹಿಟ್ಟಿನ ಗಿರಣಿ ಮತ್ತು ಹಲ್ಲರ್ ಮಿಲ್ ನ್ನು ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಯ್ಯ ಮರಣ ಹೊಂದಿದ ನಂತರ ವಾದಿಗಳೇ ದಾವಾ ಆಸ್ತಿಗೆ ಮಾಲೀಕರಾಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾತೆ ನಂ. 36 ಮತ್ತು 37 ವಾದಿಯ ತಂದೆಗೆ ದಿನಾಂಕ 30.11.1946 ರ ವಿಭಾಗದಲ್ಲಿ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಚಿಕ್ಕಲಿಂಗಯ್ಯ, ವಾದಿಗಳು ಮತ್ತು ಅವರ ತಂದೆಗೆ ಮೋಸ ಮಾಡಿ ದಾವಾ ಆಸ್ತಿಯ ಖಾತೆಯನ್ನು ಅಕ್ರಮವಾಗಿ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಲಿಂಗಯ್ಯ ಜೀವಂತ ಇರುವವರೆಗೂ ಅವರು ದಾವಾ ಆಸ್ತಿಯ ಸ್ವಾಧೀನಲ್ಲಿದರು ಅವರ ನಂತರ ಅವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಗಳು ಅಕ್ರಮವಾಗಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಹಕ್ಕಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಓ.ಎಸ್.ನಂ.484/2016**
**ಪಿ.ಡಬ್ಲ್ಯೂ -1**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

Sd/-
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.